ದಿನಾಂಕಃ 18.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ವಾದಿಯರ ಪರ ಶ್ರೀ. ಬಿ.ಕೆ.ಜೆ ವಕೀಲರಿಂದಃ**

ನಿಡಿ.69 ರಂತೆ ಹಿಸ್ಸಾ ನಂಬರ 4 ತಯಾರಿಸುವ ಕಾಲಕ್ಕೆ ಎಲ್ಲಾ ಜಮೀನುಗಳ ಮಾಲೀಕರಿಗೆ ನೋಟೀಸನ್ನು ನೀಡಲಾಗಿತ್ತು. ಆ ಬಗ್ಗೆ ನೋಟೀಸಿನ ಪ್ರತಿಗಳನ್ನು ಹಾಜರುಪಡಿಸಿದ್ದೇನೆ.ವಾದಿ ಶಂಕರ ಸಿದ್ಧಪ್ಪ ಗುಂಡಪ್ಪಗೋಳರವರಿಗೆ ನೋಟೀಸು ಜಾರಿಯಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರ ಸರಿಯಲ. ಹಿಸ್ಸಾ ನಮೂನೆ-4ನ್ನು ಸನ್ 2021 ರಲ್ಲಿ ಮಾಡಲಾಗಿರುತ್ತದೆ. ಆ ಸಮಯದಲ್ಲಿ ಪ್ರಸ್ತುತ ದಾವೆ ಚಾಲ್ತಿಯಲ್ಲಿತ್ತು ಎಂದರೆ ನಿಜ. ಸದರಿ ನಿಡಿ.69 ನ್ನು ಯಾವ ಉದ್ದೇಶಕ್ಕಾಗಿ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ಸನ್ 2015 ರಲ್ಲಿ ಪೋಡಿ ಮಾಡಲು ಅರ್ಜಿ ಸಲ್ಲಿಸಿದ್ದು, ಆ ಪ್ರಕಾರ ಸನ್ 2021 ರಲ್ಲಿ ನಿಡಿ.69 ರಂತೆ ಹಿಸ್ಸಾ ನಮೂನೆ-4 ನ್ನು ತಯಾರಿಸಿರುತ್ತಾರೆ.

ನಿಡಿ.69 ರಂತೆ ವಾದಿ ಶಂಕರ ಗುಂಡಪ್ಪಗೋಳರವರಿಗೆ ಎಷ್ಟು ಕ್ಷೇತ್ರವನ್ನು ತೋರಿಸಿರುತ್ತಾರೆಂದರೆ ನನಗೆ ಮಾಹಿತಿ ಇಲ್ಲ. ಸನ್ 2015 ರಲ್ಲಿ ಪೋಡಿ ಮಾಡಿಸಲು ಅರ್ಜಿ ಕೊಟ್ಟ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರಿ ಅರ್ಜಿಗೆ ವಾದಿ ಸಹಿ ಮಾಡಿರುವುದಿಲ್ಲ. ನಿಡಿ.69 ರಲ್ಲಿ ಯ ನಿಡಿ.69(ಬಿ) ಎಂದು ಗುರುತಿಸಲಾದ ಸಹಿ ವಾದಿಯ ಸಹಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ.69 (ಬಿ) ಎಂದು ಗುರುತಿಸಲಾದ ಸಹಿ ಹಾಗೂ ವಾದ ಪತ್ರದಲ್ಲಿ ವಾದಿಯ ಸಹಿಗಳು ಬೇರೆ ಬೇರೆಯಾಗಿರುತ್ತವೆ ಎಂದರೆ ಸಾಕ್ಷಿಯು ಎಲ್ಲಾ ಸಹಿಗಳು ಒಂದೇ ಇರುತ್ತವೆ ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣ ಚಾಲ್ತಿಯಲ್ಲಿದ್ದಾಗ ನಮಗೆ ಅನುಕೂಲವಾಗುವಂತೆ ನಿಡಿ.69 ರಂತೆ ಖೊಟ್ಟಿ ದಾಖಲೆಯನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಿಡಿ.70 ನ್ನು ಸನ್ 2021 ರಲ್ಲಿ ಸರ್ವೆ ಅಧಿಕಾರಿಗಳು ತಯಾರಿಸಿರುತ್ತಾರೆ. ಅದನ್ನು ತಯಾರಿಸಿರುವ ಅಧಿಕಾರಿಯ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ದಾಖಲೆಯನ್ನು ಸನ್ 2021 ರಲ್ಲಿ ತಯಾರಿಸಿರುವ ಬಗ್ಗೆ ಅದರಲ್ಲಿ ಉಲ್ಲೇಖ ಇರುತ್ತದೆ. ನಿಡಿ.65 ರಲ್ಲಿ ನಮೂದಿಸಿರುವ ಮಾಹಿತಿಯನ್ನು ಯಾರು ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಡಿ.66 ರಂತೆ ಮಾಡಿದ ಆದೇಶವನ್ನು ವಾದಿಗೆ ನೋಟೀಸು ನೀಡದೇ, ಆತನ ಒಪ್ಪಿಗೆ ಇಲ್ಲದೇ ಮಾಡಿರುವುದಾಗಿ ಸದರಿ ಆದೇಶವು ಖೊಟ್ಟಿಯಾಗಿರುತ್ತದೆಂದು ವಾದಿಯು ಪ್ರಸ್ತುತ ದಾವೆಯನ್ನು ಹಾಕಿ ಸಲ್ಲಿಸಿರುತ್ತಾನೆಂದರೆ ಸರಿಯಲ್ಲ. ಡಿ.ಡಿ.ಎಲ್.ಆರ್ ರವರು ಈಗಾಗಲೇ ಮಾನ್ಯ ನ್ಯಾಯಾಲಯದಲ್ಲಿ ಸಿವಿಲ್ ವಾಜ್ಯ ವಿಚಾರಣೆಗಾಗಿ ಬಾಕಿ ಇದ್ದು, ಅಲ್ಲಿಯೇ ವ್ಯಾಜ್ಯವನ್ನು ಇತ್ಯರ್ಥಪಡಿಸಿಕೊಳ್ಳುವಂತೆ ಆದೇಶ ಮಾಡಿರುತ್ತಾರೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ